04176

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2553

ಸದಸ್ಯರ ಹೆಸರು : ಡಾ:ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 24-03-2022

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯ ಮಂತ್ರಿಗಳು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರಿ ನೌಕರರುಗಳಿಗೆ ಯಥಾ ರೀತಿಯ ಸೇವಾ ಷರತ್ತುಗಳೊಂದಿಗೆ ಕೇಂದ್ರ ಸರ್ಕಾರದ ಮಾದರಿಯಲ್ಲಿ ವೇತನ ಜಾರಿ ಮಾಡಿ ಪ್ರೋತ್ಸಾಹಿಸುವುದೆ; | ರಾಜ್ಯ ಸರ್ಕಾರವು ಸಾಂಪ್ರದಾಯಿಕವಾಗಿ ಕೇಂದ್ರ ವೇತನ ಆಯೋಗಗಳ ಶಿಫಾರಸ್ಸು ಹಾಗೂ ಕೇಂದ್ರ ವೇತನ ಪರಿಷ್ಕರಣೆಯ ಅವಧಿಯನ್ನು ಅನುಸರಿಸದೇ, ತನ್ನದೇ ಆದ ವೇತನ ಆಯೋಗ/ವೇತನ ಸಮಿತಿಗಳ ಶಿಫಾರಸ್ಸಿನ ಮೇರೆಗೆ, ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಕಾಲದಿಂದ ಕಾಲಕ್ಕೆ ಪರಿಷ್ಕರಿಸಿಕೊಂಡು ಬಂದಿರುತ್ತದೆ. ಇದು ಸರ್ಕಾರದ ನೀತಿಯಾಗಿರುತ್ತದೆ.<br>ಕೇಂದ್ರ ಸರ್ಕಾರದ ಸೇವಾ ನಿಯಮಗಳು ಮತ್ತು ಕೇಂದ್ರ ವೇತನ ಆಯೋಗದ ಶಿಫಾರಸ್ಸುಗಳು ರಾಜ್ಯ ಸರ್ಕಾರದ ನೌಕರರಿಗೆ ಅನ್ವಯಿಸುವುದಿಲ್ಲ. ಆದುದರಿಂದ, ಕೇಂದ್ರ ಸರ್ಕಾರದ ಹುದ್ದೆ ಮತ್ತು ಹುದ್ದೆಗಳಿಗೆ ನಿಗದಿಪಡಿಸಿರುವ ವೇತನ ಶ್ರೇಣಿ ಮತ್ತು ಭತ್ಯೆಗಳನ್ನು ರಾಜ್ಯ ಸರ್ಕಾರದ ಹುದ್ದೆಗಳಿಗೆ ಅನ್ವಯಿಸಿ ಹೋಲಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. |
| ಆ) | 2022 ಮತ್ತು 2023 ರಲ್ಲಿ ರಾಜ್ಯದಲ್ಲಿ | 2022-23ರ ಆಯವ್ಯಯ ವರ್ಷದಲ್ಲಿ |



Generated from eOffice by G JAGADEESHA, CMO-JS(GJ), JOINT SECREATRY, CMO on 22/03/2022 05:20 PM

| | | |
|---|---|---|
| | ನಿವೃತ್ತಿಯಾಗುತ್ತಿರುವ ವಿವಿಧ ಇಲಾಖೆಯ ಸರ್ಕಾರಿ ನೌಕರರುಗಳಿಗೆ ನಿಯಮಾನುಸಾರ ನೀಡಬೇಕಾಗಿರುವ ನಿವೃತ್ತಿ ನಂತರದ ಉಪದಾನ, ನಿವೃತ್ತಿ ವೇತನ ಇತ್ಯಾದಿಯಾಗಿ ವೆಚ್ಚವಾಗುವ ಮೊತ್ತದ ಅಂದಾಜು ವೆಚ್ಚವೆಷ್ಟು; | ನಿವೃತ್ತರಾಗುತ್ತಿರುವ ವಿವಿಧ ಇಲಾಖೆಯ ವಿವಿಧ ವರ್ಗದ ನೌಕರರಿಗೆ ಪಿಂಚಣಿ/ಪಿಂಚಣಿ ಸೌಲಭ್ಯ ಪಾವತಿಸಲು ಉಂಟಾಗುವ ಒಟ್ಟು ವೆಚ್ಚ ರೂ.4,992.41 ಕೋಟಿಗಳಷ್ಟು ಎಂದು ಅಂದಾಜಿಸಲಾಗಿದೆ. |
| ಇ) | ಕರೋನಾ ಅಲೆಗಳ ಸ್ಥಿತಿಯಿಂದ ಹೊರ ಬಂದು ಸರ್ಕಾರದ ಆರ್ಥಿಕ ಸ್ಥಿತಿ ಸುಧಾರಿಸಲು ಮತ್ತು ಚೇತರಿಸಿಕೊಳ್ಳಲು ರಾಜ್ಯದಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಕರೋನಾ ವರ್ಷವೆಂದು ಪರಿಗಣಿಸಿ ಒಂದು ವರ್ಷ ಹೆಚ್ಚಿಸುವ ಪರಿಕಲ್ಪನೆ ಆರ್ಥಿಕ ಸ್ಥಿತಿ ಸುಧಾರಿಸಲು ಪೂರಕವಲ್ಲವೆ: ಈ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ? | ಕರೋನಾ ಸಾಂಕ್ರಾಮಿಕದ ಅವಧಿಯನ್ನು ಕರೋನಾ ವರ್ಷವೆಂದು ಪರಿಗಣಿಸಿ ನೌಕರರ ನಿವೃತ್ತಿ ವಯಸ್ಸನ್ನು ಪರಿಷ್ಕರಿಸುವ ಯಾವುದೇ ಪ್ರಸ್ತಾವನೆ ಸದ್ಯ ಸರ್ಕಾರದ ಮುಂದೆ ಇರುವುದಿಲ್ಲ. |

ಸಂ: ಆಇ 20 ಎಸ್‌ಆರ್‌ಪಿ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



Generated from eOffice by G JAGADEESHA, CMO-JS(GJ), JOINT SECREATRY, CMO on 22/03/2022 05:20 PM